ಕರ್ನಾಟಕ ಸರ್ಕಾರ

**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003**

ಸಂಖ್ಯೆ: ವಿ1/ವಿಸಪ/ಅ.ಸೂ/25/2020 ದಿನಾಂಕ:20-02-2020

**-: ಸುತ್ತೋಲೆ :-**

**ವಿಷಯ:** 2020ನೇ ಮೇ-ಮಾಹೆಯಲ್ಲಿ ನಡೆಯಲಿರುವ ವಿಶೇಷ ಸಂಗೀತ/ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ

**ಉಲ್ಲೇಖ:** ಈ ಕಛೇರಿ ಅಧಿಸೂಚನೆ ಸಮ ಪತ್ರ ಸಂಖ್ಯೆ ದಿನಾಂಕ: 14.02.2020

*******

1.ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಮೇ-2020ನೇ ಮಾಹೆಯಲ್ಲಿ ನಡೆಸಲಿರುವ ಶಾಸ್ತ್ರೀಯ ಸಂಗೀತ (ಕರ್ನಾಟಕ/ಹಿಂದೂಸ್ಥಾನಿ) ಭರತನಾಟ್ಯ, ಕೂಚಿಪುಡಿ, ಕಥಕ್, ಮತ್ತು ತಾಳವಾದ್ಯ (ಕರ್ನಾಟಕ/ಹಿಂದೂಸ್ಥಾನಿ) ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪರೀಕ್ಷೆಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ, ನಿಗಧಿತ ಪರೀಕ್ಷಾ ಶುಲ್ಕ ಮುಂತಾದ ವಿವರಗಳನ್ನು ಉಲ್ಲೇಖಿತ ಅಧಿಸೂಚನೆಯಲ್ಲಿ ನೀಡಲಾದ ನಿಯಮಗಳನ್ವಯ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

2. ಅದರಂತೆ ಉಲ್ಲೇಖಿತ ಅಧಿಸೂಚನೆಯಲ್ಲಿ ಹಿರಿಯ ದರ್ಜೆ ಪರೀಕ್ಷೆ ಮತ್ತು ವಿದ್ವತ್‌ಪೂರ್ವ ಪರೀಕ್ಷೆಗೆ ಪಠ್ಯಕ್ರಮದಂತೆ "ಹಿರಿಯ ದರ್ಜೆ" ಪರೀಕ್ಷೆಗೆ ಹಾಜರಾಗಲು ಕಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ ಮೂರು ವರ್ಷ ಆಗಿರಬೇಕು ಅಥವಾ ದಿನಾಂಕ:1-03-2020ಕ್ಕೆ ಸರಿಯಾಗಿ 17 ವರ್ಷ ತುಂಬಿದ್ದು, ಅಭ್ಯರ್ಥಿಯು ಪದವಿಪೂರ್ವ ಹಂತದಲ್ಲಿ(ಪಿ.ಯು.ಸಿ) ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ವ್ಯಾಸಂಗ ಮಾಡಿ ತೇರ್ಗಡೆಯಾಗಿದ್ದರೆ ನೇರವಾಗಿ ಹಿರಿಯ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ. ಹಾಗೂ ವಿದ್ವತ್‌ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು ಹಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3 ವರ್ಷಗಳಾಗಿರಬೇಕು ಅಥವಾ ದಿನಾಂಕ 01-03-2020ಕ್ಕೆ 19 ವರ್ಷ ಪೂರ್ಣಗೊಂಡಿರುವ ವಿದ್ಯಾರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಪದವಿ ಹಂತದಲ್ಲಿ ಐಚ್ಛಿಕವಾಗಿ ತೆಗೆದುಕೊಂಡು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆ ವಿದ್ವತ್‌ಪೂರ್ವ ಪರೀಕ್ಷೆ ನೇರವಾಗಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದೆ.

3. ಕ್ರ.ಸಂ 2ರಲ್ಲಿ ವಿವರಿಸಿರುವಂತೆ "ಹಿರಿಯ ದರ್ಜೆ" ಅಥವಾ ವಿದ್ವತ್ ಪೂರ್ವ ಪರೀಕ್ಷೆಗಳನ್ನು ನೇರವಾಗಿ ತೆಗೆದುಕೊಳ್ಳಲು ಬಯಸುವ ಅಭ್ಯರ್ಥಿಗಳಿಗೆ ಆನ್‌ಲೈನ್ ತಂತ್ರಾಂಶದಡಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವುದಿಲ್ಲ, ಇಂತಹ ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಬಯಸಿದಲ್ಲಿ ಪರೀಕ್ಷಾ ಕೇಂದ್ರದಲ್ಲಿಯೇ ನೇರವಾಗಿ Manual Application(ಕಳೆದ ವರ್ಷದ ಅರ್ಜಿಯನ್ನು) ನೀಡಬೇಕು. ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಅಗತ್ಯ ದಾಖಲೆಗಳನ್ನು ಪಡೆದು ಕೇಂದ್ರದ ಮುಖ್ಯ ಅಧೀಕ್ಷಕರುಗಳು ಪರಿಶೀಲಿಸಿ, ಕ್ರೋಢೀಕರಿಸಿದ ಅರ್ಜಿಗಳನ್ನು ಸಂಗೀತ ವಿಭಾಗದ ಸಹಾಯಕ ನಿರ್ದೇಶಕರಿಗೆ ತುರ್ತಾಗಿ ಸಲ್ಲಿಸಲು ತಿಳಿಸಿದೆ.

2012ನೇ ಸಾಲಿನಿಂದ ಇಲ್ಲಿಯವರೆಗೆ ಅನುತ್ತೀರ್ಣರಾದ ಎಲ್ಲಾ ಅಭ್ಯರ್ಥಿಗಳಿಗೆ MSA(MARKS STATEMENT-CUM-APPLICATION)ಅಲ್ಲಿ ಅಭ್ಯರ್ಥಿಗಳ ಮಾಹಿತಿಯನ್ನು ತಂತ್ರಾಂಶದಲ್ಲಿ AUTO FETCH ಮಾಡಲಾಗಿದ್ದು, ಅಭ್ಯರ್ಥಿಯ ವಿವರ ಹಾಗೂ ಗಳಿಸಿದ ಅಂಕಗಳ ವಿವರ ಇರುತ್ತದೆ. ಈ ಅಭ್ಯರ್ಥಿಗಳು ಸಹ ಮೇ-2020ರಲ್ಲಿ ನಡೆಯುವ ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗ ಈ ಹಿಂದೆ ಪರೀಕ್ಷೆ ತೆಗೆದುಕೊಂಡಿರುವ ಕೇಂದ್ರವನ್ನು ಆಯ್ಕೆ ಮಾಡಿಕೊಂಡು ಮಂಡಳಿಯ ವೆಬ್‌ಸೈಟ್ www.kseeb.kar.nic.in ಮುಖಾಂತರ ಆನ್‌ಲೈನ್ ಅರ್ಜಿ ಸಲ್ಲಿಸಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಪುನರಾವರ್ತಿತ ಅಭ್ಯರ್ಥಿಗಳಿಗೆ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ. ಉಳಿದಂತೆ ಅಧಿಸೂಚನೆಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಎಲ್ಲಾ ಡಯಟ್ ಪ್ರಾಂಶುಪಾಲರುಗಳು ಜಿಲ್ಲಾ ನೋಡಲ್ ಅಧಿಕಾರಿಗಳು ಮತ್ತು ಕೇಂದ್ರದ ಮುಖ್ಯಸ್ಥರುಗಳು ಸದರಿ ಮಾಹಿತಿಯನ್ನು ಎಲ್ಲರ ಗಮನಕ್ಕೆ ತರಲು ತಿಳಿಸಲಾಗಿದೆ.

[ವಿ.ಸುಮಂಗಲ] 20/2

ನಿರ್ದೇಶಕರು

(ಇತರೆ ಪರೀಕ್ಷೆಗಳು)

**ಇವರಿಗೆ,**

1. ರಾಜ್ಯದ ಎಲ್ಲಾ ಸಂಗೀತ/ನೃತ್ಯ/ತಾಳವಾದ್ಯ ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ

3. ಹಿರಿಯ ಸಹಾಯಕ ನಿರ್ದೇಶಕರು ಸಂಗೀತ/ನೃತ್ಯ ವಿಭಾಗ ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ
4. ವಿಭಾಗೀಯ ಅಧೀಕ್ಷಕರು ಬೆಂಗಳೂರು/ಮೈಸೂರು/ಬೆಳಗಾಂ/ಕಲಬುರ್ಗಿ ವಿಭಾಗ ಸಹನಿರ್ದೇಶಕರ ಕಛೇರಿ ಇವರುಗಳಿಗೆ ಮಾಹಿತಿಗಾಗಿ.
5. ಹಿರಿಯ ಸಹಾಯಕ ನಿರ್ದೇಶಕರು ಗಣಕಶಾಖೆ ಇವರಿಗೆ ಅಂತರ್‌ಜಾಲದಲ್ಲಿ ಪ್ರಕಟಿಸಲು ಮತ್ತು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.